ಸಿಸಿ.ನಂ.626/2023
ಡಿ ಡಬ್ಲ್ಯೂ-1

<u>ದಿಃ**17.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಫಿರ್ಯಾದಿ ಪರ Sri.T.H.V.,ವಕೀಲರಿಂದಃ-

2007 ರಲ್ಲಿ ಮಲ್ಲಾಪುರದ ಪ್ರೌಢಶಾಲೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ. 2007 ರಲ್ಲಿ ನನ್ನ ಹೆಸರಿಗೆ ರೂ.50,000/-ಮೊತ್ತದ 623509487 ಪಾಲಿಸಿ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪು ಇರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಪಾಲಿಸಿಗೆ ನಾನು ಪ್ರತಿ ತಿಂಗಳು ರೂ.321/- ಗಳ ಪ್ರಿಮಿಯಂ ಪಾವತಿ ಮಾಡುತ್ತಿದ್ದೇ ಎಂದರೆ ಸಾಕ್ಷಿ ಮುಂದುವರಿದು ಸ್ವಲ್ಪ ದಿನಗಳ ಕಾಲ ಸಂಬಳದಲ್ಲಿ ಪಾವತಿ ಮಾಡುತ್ತಿದ್ದೆ ನಂತರ ಅದು ರದ್ದಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಪಾಲಿಸಿಯನ್ನು ಫಿರ್ಯಾದಿದಾರರು ಮಾಡಿಸಿರುತ್ತಾರೆ ಎಂದರೆ ಸರಿ. ನನಗೆ ಫಿರ್ಯಾದಿಯವರು 2007 ರಿಂದ ಈ ರೀತಿಯಾಗಿ ಪರಿಚಯವಾಗಿರುತ್ತಾರೆ ಎಂದರೆ ಸರಿ. ನಿಪಿ1 ರಲ್ಲಿ ಇರುವ ಸಹಿ ನನ್ನದು ಎಂದರೆ ಸರಿ. ನನ್ನ ವಿಳಾಸ ನಿಪಿ5 ರ ಅಂಚೆ ಲಕೋಟೆಯಲ್ಲಿ ನಮೂದಿಸಿರುವ ವಿಳಾಸ ಇರುತ್ತದೆ ಎಂದರೆ ಸರಿ. ನಿಪಿ5 ಅಂಚೆ ಲಕೋಟೆಯು ನನಗೆ ಜಾರಿಯಾದರೂ ಸಹ ನಾನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಮಾಹಿತಿಯು ನ್ಯಾಯಾಲಯದ ಸಮನ್ಸ್ ಜಾರಿಯಾದ ನಂತರ ಬಂದಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರಾದ ನಂತರ ನಂಜಪ್ಪರವರ ವಿರುದ್ಧ ನಾನು ಯಾವುದೇ ಕಾನೂನು ಕ್ರಮ

ಜರುಗಿಸಿರುವುದಿಲ್ಲ. ನಿಪಿ1 ನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಪಿರ್ಯಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ. ನನಗೆ 2007 ರಿಂದ ಪಿರ್ಯಾದಿಯವರ ಪರಿಚಯ ಇದ್ದ ಸಲುವಾಗಿ ದಿ:08.12.2022 ರಂದು ರೂ. 2 ಲಕ್ಷ ಹಣ ಸಾಲ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲದ ತಿರುವಳಿಗೆ ನಿಪಿ1 ಚೆಕ್‌ನ್ನು ನಾನೇ ಪಿರ್ಯಾದಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಂಜಪ್ಪರವರ ಮೂಲಕ ನಿಪಿ1 ಚೆಕ್ ನ್ನು ಪಿರ್ಯಾದಿಯವರು ಈ ಪ್ರಕರಣ ಸಲ್ಲಿಸಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಂಜಪ್ಪರವರಿಗೆ 02 ಚೆಕ್‌ಗಳನ್ನು ನೀಡಿರುವ ಬಗ್ಗೆ ಸದರಿ ಚೆಕ್‌ಗಳ ನಂಬರುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಪಿರ್ಯಾದಿರವರಿಂದ ಪಡೆದ ಹಣದ ತಿರುವಳಿಯ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗಲೂ ಸಹ ಪಿರ್ಯಾದಿಯವರಿಗೆ ರೂ.2 ಲಕ್ಷ ಹಣ ನೀಡುವ ಬಾದ್ಯತೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ನೀಡಬೇಕಾದ ಹಣವನ್ನು ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು**,** ಜಗಳೂರು